**ಅಸಲು ದಾವ ಸಂಖ್ಯೆಃ 463/2018**

**ಡಿ.ಡಬ್ಲೂ -1**

ದಿಃ 13-12-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು ವಾದಿ ಪರ ವಕೀಲರುಃ ಶ್ರೀ ಎಸ ಜಿ ಕೆ ರವರಿಂದಃ-**

1. 2018ನೇ ಇಸವಿಯಲ್ಲಿ ಗ್ರಾಮ ಪಂಚಾಯಿತಿ ದಾಖಲೆಗಳಲ್ಲಿ ನನ್ನ ಹೆಸರನ್ನು ನಮೂದುಮಾಡಿಕೊಳ್ಳುವಾಗ ನಾನು ಅಲ್ಲಿ ಸಲ್ಲಿಸಿದ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನಾ ಎಂದರೆ ಸಾಕ್ಷಿ ತನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. 2018ನೇ ಇಸವಿಯಲ್ಲಿ ನಿಡಿ-18ರ ಉತಾರ ಪಡೆಯುವಾಗ ನಾನು ಗ್ರಾಮ ಪಂಚಾಯಿತಿಯವರಿಗೆ ಕ್ರಯ ಪತ್ರವನ್ನು ಸಲ್ಲಿಸಿರುವುದಿಲ್ಲ, ಕ್ರಯದ ಕರಾರುಪತ್ರವನ್ನು ಸಲ್ಲಿಸಿರುತ್ತೇನೆ. ನಿಡಿ-18ರ ಉತಾರ ತಪ್ಪಾಗಿ ಕೊಟ್ಟಿರುವುದಾಗಿ ವಾದಿ ತಾಲೂಕಾ ಪಂಚಾಯಿತಿಯಲ್ಲಿ ಮೇಲ್ಮನವಿ ಮಾಡಿರುತ್ತಾರೆ ಹಾಗೂ ಸದರಿ ಮೇಲ್ಮನವಿಯಲ್ಲಿ ನಾನು ಸಹ ಹಾಜರಾಗಿರುತ್ತೇನೆ ಎಂದರೆ ಸರಿ. ನಾನು ನಿಪಿ-18ರ ದಾಖಲೆಗೆ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿ. ನಾನು ಇಲ್ಲಿಯವರೆಗೂ ಕಲ್ಲಪ್ಪ ಮಹದೇವ ಪಾಟೀಲರವರಿಂದ ಕ್ರಯ ಪತ್ರ ಮಾಡಿಕೊಂಡಿರುವುದಿಲ್ಲ ಎಂದರೆ ಸರಿ. ಆದರೆ ನಿಪಿ-18 ರಲ್ಲಿ ನಾವು ಖರೀದಿ ಮಾಡಿಕೊಂಡಿರುತ್ತೆವೆ ಎಂದು ನಾನು ನಮೂದು ಮಾಡಿರುತ್ತೇನೆ ಎಂದರೆ ಸರಿ. ನಿಪಿ-18 ರ ಜೊತೆ ನಿಪಿ-19 ರಂತೆ ನಾನು ನಕಾಶೆಯನ್ನು ಸಹ ಸಲ್ಲಿಸಿರುತ್ತೇನೆ ಎಂದರೆ ಸರಿ. ನಿಪಿ-19 ರಲ್ಲಿ ಖುಲ್ಲಾ ಜಾಗವನ್ನು ತೋರಿಸಿರುತ್ತೇನೆ ಎಂದರೆ ಸರಿ. ಸದರಿ ನಕ್ಷೆಯಲ್ಲಿ ಸರ್ವೆ ನಂ.22/4 ರಲ್ಲಿ ಕಲ್ಲಪ್ಪ ಮಹದೇವ ಪಾಟೀಲ ಎಂದು ತೋರಿಸಿ ಖುಲ್ಲಾ ಜಾಗ ಎಂದು ತೋರಿಸಿರುತ್ತೇನೆ ಎಂದರೆ ಸರಿ. ಸದರಿ ನಕ್ಷೆಯಲ್ಲಿ ಉತ್ತರ ಭಾಗಕ್ಕೆ ಮನೆ ನಂ.1ಬಿ, 1ಎ ಮತ್ತು 1ನ್ನು ಮಲ್ಲಪ್ಪ , ಶೆಟ್ಟೆಪ್ಪ ಮತ್ತು ಮಾಣಿಕನವರ ಮನೆ ಎಂದು ತೋರಿಸಿರುತ್ತೇನೆ ಎಂದರೆ ಸರಿ. ಸದರಿ ಮಲ್ಲಪ್ಪ , ಶೆಟ್ಟೆಪ್ಪ ಮತ್ತು ಮಾಣಿಕನವರು ಸರ್ವೆ ನಂ.22/2 ಜಾಗಕ್ಕೆ ಸಂಬಂಧಪಟ್ಟವರಲ್ಲ

ಎಂದರೆ ಸರಿಯಲ್ಲ. ಅವರು ಸರ್ವೇ ನಂ.22/2ಕ್ಕೆ ಯಾವ ರೀತಿ ಸಂಬಂಧ ಹೊಂದಿರುತ್ತಾರೆ ಎಂದರೆ ಸಾಕ್ಷಿಯು ಅವರಿಗೂ ಸದರಿ ಜಾಗಕ್ಕೂ ಸಂಬಂಧ ಇರುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ಲಿಖಿತ ಹೇಳಿಕೆಯ ಜೊತೆ ಹಾಜರುಪಡಿಸಿರುವ ನಕ್ಷೆಯಲ್ಲಿ ಮಾಣಿಕ ಹಾಗೂ ಮಲ್ಲಪ್ಪ ರವರ ಮನೆಗಳನ್ನು ತೋರಿಸಿರುವುದಿಲ್ಲ ಎಂದರೆ ಸರಿ. ನಾನು ನಿಪಿ-18ರ ಜೊತೆ ಗ್ರಾಮ ಪಂಚಾಯಿತಿಗೆ ಉತಾರದಲ್ಲಿ ನನ್ನ ಹೆಸರು ನಮೂದು ಮಾಡಲು ಸಲ್ಲಿಸಿದ ನಿಪಿ-19 ರಂತೆ ಇರುವ ನಕ್ಷೆ ಸರಿ ಇರುತ್ತದೆ. ನಿಪಿ-19 ರಲ್ಲಿ ಸರ್ವೇ ನಂ.22/2ರಲ್ಲಿ ನನ್ನ ಮನೆ ಇರುತ್ತದೆ ಎಂದು ತೋರಿಸಿರುವುದಿಲ್ಲ ಎಂದರೆ ಸಾಕ್ಷಿಯು ಅದನ್ನು ತೋರಿಸಲಾಗಿದೆ ಆದರೆ ಈಗ ತನಗೆ ಹೇಳಲು ಬರುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ-19ನ್ನು ಮನೆ ನಂಬರ 1ಬಿ ಮಲ್ಲಪ್ಪ ರವರಿಗೆ ಸೇರಿದ್ದು ಹಾಗೂ ಮನೆ ನಂಬರ 1 ಮಾಣಿಕರವರಿಗೆ ಸೇರಿದ್ದು ಎಂದು ತೋರಿಸಲು ನಾನು ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಆ ರೀತಿ ಮಲ್ಲಪ್ಪ ಹಾಗೂ ಮಾಣಿಕರವರು ಸರ್ವೇ ನಂ.22/2 ರಲ್ಲಿ ಯಾವುದೇ ಮನೆ ಕಟ್ಟಿರುವುದಿಲ್ಲ ಆದರೂ ಸಹ ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೇ ನಂ.22/3ರ ಜಾಗವು ಮಾಣಿಕ ಬರಮಕಳಪತ್ರಿ ರವರಿಗೆ ಸೇರಿರುತ್ತದೆ. ಮಲ್ಲಪ್ಪ ಬರಮ ಕಳಪತ್ರಿ ರವರು ಸರ್ವೇ ನಂಬರ 22/2 ಕ್ಕೆ ಸಂಬಂಧಪಟ್ಟವರಾಗಿರುತ್ತಾರೆ. ಸದರಿ ವಿಚಾರವನ್ನು ನನ್ನ ಲಿಖಿತ ಹೇಳಿಕೆಯಲ್ಲಿ ಅಥವಾ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ನಾನು ಹೇಳಿರುವುದಿಲ್ಲ ಎಂದರೆ ಸರಿ. ಮಲ್ಲಪ್ಪ ಮತ್ತು ಮಾಣಿಕರವರು ಯಾವಾಗ ತಮ್ಮ ಮನೆಗಳನ್ನು ಕಟ್ಟಿಕೊಂಡರು ಎಂದರೆ ಸಾಕ್ಷಿಯು ಸರ್ವೇ ನಂ.22/3 ರ ಜಾಗವು ಮಾಣಿಕ ಬರಮ ಕಳಪತ್ರಿರವರಿಗೆ ಸೇರಿದ್ದು ಅವರು ಅಲ್ಲಿ ಮನೆ ಕಟ್ಟಿಕೊಂಡಿರುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ-15ರಂತೆ ನಾನು ಗ್ರಾಮ ಪಂಚಾಯಿತಿಗೆ ಸಲ್ಲಿಸಿದ ಅರ್ಜಿಯಲ್ಲಿ ನಾನು ಪಂಚಾಯಿತಿಗೆ ಖರೀದಿ ಪತ್ರ ಹಾಗೂ ಸರ್ವೇ ಉತಾರ ಸಲ್ಲಿಸಿರುವುದಾಗಿ ನಮೂದು ಇರುತ್ತದೆ ಎಂದರೆ ಸರಿ. ಖರೀದಿ ಪತ್ರ ನನ್ನ ಬಳಿ ಇರುವುದಿಲ್ಲ

ಹಾಗೂ ದಾವಾ ಸ್ವತ್ತಿನ ಸರ್ವೇ ಉತಾರ ವಾದಿಯ ಹೆಸರಿಗೆ ಇರುತ್ತದೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಪಹಣಿ ಪತ್ರಿಕೆ ವಾದಿಯ ಹೆಸರಿಗೆ ಇರುತ್ತದೆ ಎಂದರೆ ಸಾಕ್ಷಿಯು ಅದು ಬೋಗಸ್ ಇರುತ್ತದೆ ಎಂದು ನುಡಿಯುತ್ತಾರೆ. ನಿಪಿ-16 ರಂತೆ ಗ್ರಾಮ ಪಂಚಾಯಿತಿರವರು ನೀಡಿರುವ ತೇರಿಗೆ ನಿರ್ಧರಣ ಪಟ್ಟಿಯಲ್ಲಿ ನನ್ನ ಭಾವಚಿತ್ರವನ್ನು ಖಾಲಿ ಜಾಗದಲ್ಲಿ ತೆಗೆದಿರುವ ಭಾವಚಿತ್ರ ಎಂದು ಗಮನಿಸಿ ಸದರಿ ದಾಖಲೆಗಳನ್ನು ನೀಡಿರುತಾರೆ ಎಂದರೆ ಸರಿ. ವಾದಿಯರ ಖುಲ್ಲಾ ಜಾಗದ ಭಾವ ಚಿತ್ರ ತೆಗೆದುಕೊಂಡು ನಾನು ಸುಳ್ಳು ದಾಖಲೆಗಳನ್ನು ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

2. ಕಂಗ್ರಾಳಿ ಕೆಹೆಚ್ ಗ್ರಾಮದ ಸರ್ವೇ ನಂ.319/5 , 341/2, 331/4, 79/2, 302 , 309, 306, 305/1, 305/2, 304, 303, 301, 382/2, 382/3, 382/1, 79/1, 318/4 ರ ಆಸ್ತಿಗಳ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ನಾನು ಮನೆ ಕಟ್ಟುವ ಕಾಲದಲ್ಲಿ ಗ್ರಾಮ ಪಂಚಾಯಿತಿಯಿಂದ ಯಾವುದೇ ಪರವಾನಿಗೆ ಪಡೆದಿರುವುದಿಲ್ಲ. ಸರ್ವೇ ನಂ.22 ರಲ್ಲಿ ಎಷ್ಟು ಹಿಸ್ಸಾ ಸಂಖ್ಯೆಗಳು ಇರುತ್ತವೆ ಹಾಗೂ ಎಷ್ಟು ವಿಸ್ತೀರ್ಣ ಇರುತ್ತದೆ ಎಂದು ನನಗೆ ಗೊತ್ತಿಲ್ಲ. ಸರ್ವೇ ನಂ.22 ರಲ್ಲಿ ಯಾವ ದಿಕ್ಕಿಗೆ ನನ್ನ ಮನೆ ಬರುತ್ತದೆ ಎಂದರೆ ಸಾಕ್ಷಿ ದಕ್ಷಿಣ ದಿಕ್ಕಿಗೆ ಎಂದು ನುಡಿಯುತ್ತಾರೆ. ನಿಡಿ -15 ರ ದಾಖಲೆಯಲ್ಲಿ ಸರ್ವೇ ನಂಬರ 23ರ ಜಾಗದ ಕುರಿತು ತಪ್ಪು ನಮೂದಾಗಿರುತ್ತದೆ ಎಂದು ನಾನು ಯಾವುದೇ ಮೇಲ್ಮನವಿಯನ್ನು ಸಲ್ಲಿಸಿರುವುದಿಲ್ಲ. ಸರ್ವೇ ನಂ.22/2ರ ಮಾಲೀಕರು ಕಲ್ಲಪ್ಪ ಮಹದೇವ ಪಾಟೀಲ ಆಗಿದ್ದು ಸದರಿ ಜಮೀನಿಗೆ ಪ್ರಕಾಶ ಪುಂಡಲೀಕ ಪಿಸ್ಸೆ ಯಾವುದೇ ರೀತಿ ಸಂಬಂಧ ಹೊಂದಿರುವುದಿಲ್ಲ ಎಂದರೆ ಸರಿ. ಅದೇ ರೀತಿ ಗುರುನಾಥ ಲಕ್ಷ್ಮಣ ಪಾಟೀಲರವರಿಗೂ ಸರ್ವೇ ನಂಬರ 22/3ಕ್ಕೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ಸರ್ವೇ ನಂಬರ 22/3ಕ್ಕೂ ಗೋಪಾಲ ಬಾಬು ಕೊಲೆ ರವರಿಗೂ ಯಾವುದಾದರೂ ಸಂಬಂದಾ ಇದೆಯಾ ಎಂದರೆ ನನಗೆ

ಗೊತ್ತಿಲ್ಲ. ಸರ್ವೇ ನಂಬರ 22/3ಕ್ಕೆ ಮಾಣಿಕ ಬರಮ ಕಳಪತ್ರಿ ಸಂಬಂಧ ಹೊಂದಿರುತ್ತಾನೆ. ಸರ್ವೇ ನಂಬರ 22/3 ರಲ್ಲಿ ಗುರುನಾಥ ಅಥವಾ ಗೋಪಾಲ ಬಾಬು ಕೊಲೆ ರವರು ಮನೆ ಕಟ್ಟಿರುವುದಿಲ್ಲ. ಅದೇ ರೀತಿ ಸರ್ವೇ ನಂಬರ 22/2 ರಲ್ಲಿ ಪ್ರಕಾಶ ಪುಂಡಲೀಕ ಪಿಸ್ಸೆ ರವರು ಮನೆ ಕಟ್ಟಿರುವುದಿಲ್ಲ ಎಂದರೆ ಸರಿ. ಸರ್ವೇ ನಂಬರ 22/4 ರ ಜಮೀನು ಮಾಣಿಕ ಬರಮ ಕಳಪತ್ರಿರವರಿಗೆ ಸೇರಿರುತ್ತದೆ.

3. ಸರ್ವೇ ನಂ.22 ರಲ್ಲಿ ಹಿಸ್ಸಾ ಪೋಡ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಾರಾಯಣ ಪಾಟೀಲ ಹಾಗೂ ಸಹದೇವ ಬಾಬು ಪಾಟೀಲ ರವರು ಯಾವ ಸರ್ವೇ ನಂಬರನಲ್ಲಿ ಮನೆ ಕಟ್ಟಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಕಲ್ಲಪ್ಪ ಮಹದೇವ ಪಾಟೀಲರವರು ಹೆಬ್ಬಟ್ಟಿನ ಗುರುತನ್ನು ಲಗತ್ತಿರುತ್ತಾರೆ ಎಂದರೆ ಸರಿಯಲ್ಲ, ಸಾಕ್ಷಿ ಅವರು ಸಹಿ ಮಾಡುತ್ತಾರೆ ಎಂದು ನುಡಿಯುತ್ತಾರೆ. ನಾನು ಎಂದಿಗೂ ಸಹ ಕಲ್ಲಪ್ಪ ಪಾಟೀಲರವರಿಗೆ ರೂ.10150/- ಗಳನ್ನು ಕೊಟ್ಟಿರುವುದಿಲ್ಲ ಹಾಗೂ ಅವರು ಎಂದಿಗೂ ಸಹ ನನಗೆ ಕ್ರಯದ ಕರಾರುಪತ್ರ ಮಾಡಿಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಸರ್ವೇ ನಂ.22/2ರ ಜಮೀನು ಖುಲ್ಲಾ ಜಾಗ ಇರುತ್ತದೆ ಹಾಗೂ ಸದರಿ ಜಮೀನಿಗೂ ನನಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಖರೀದಿ ಕರಾರುಪತ್ರದಲ್ಲಿ ಅನುಮತಿಯ ಬಗ್ಗೆ ನಮೂದಾಗಿದ್ದು ಅದು ಯಾವ ಅನುಮತಿ ಎಂದು ನನಗೆ ಹೇಳಲು ಬರುವುದಿಲ್ಲ. ಈ ದಾವೆಗೆ ಅನುಕೂಲವಾಗಲಿ ಎಂದು ನಿಡಿ-16 ಹಾಗೂ ನಿಡಿ-42ರ ಖರೀದಿ ಕರಾರಪತ್ರವನ್ನು ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸರ್ವೇ ನಂಬರ 22/2ಕ್ಕೂ ನನಗೂ ಯಾವುದೇ ಸಂಬಂಧ ಇಲ್ಲದಿದ್ದರೂ ಸಹಾ ವಾದಿಯ ಜಮೀನನ್ನು ಲಪಾಟಾಯಿಸುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ ಸರಿಯಿದೆ.

Sd/-
ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು,
ಬೆಳಗಾವಿ.